Breach of the T. B. Left Bank Channel

ಶ್ರೀ ಎ. ಶರಣಪ್ಪ.—ರಾಯಚೂರು ಜಿಲ್ಲೆ ಪ್ರದೇಶಕ್ಕೆ ನೀರನ್ನೊದಗಿಸುವ ತುಂಗಭದ್ರ ಎಡ ದಂಡೆನಾಲೆ ಅನೇಕ ಸಲ ಒಡೆದುಹೋಗುತ್ತಿದೆ, ಈಗ 7ನೆಯ ಸಲ ಬ್ರೀಚ್ ಆಗಿದೆ. ಇದರಿಂದಾಗಿ ಆ ಕಡೆ ನೀರಾವರಿಗೆ ತೊಂದರೆಯಾಗಿದೆ. ಸರಕಾರ ಇದರ ಬಗ್ಗೆ ಏನು ಕ್ರಮ ಕೈಕೊಂಡಿದೆಯೆಂಬುದನ್ನು ಹೇಳಬೇಕು. ಸರಕಾರಕ್ಕೆ ಸಾಕಷ್ಟು ಪತ್ರ ಬಂದಿವೆ.

ಅಧ್ಯಕ್ಷರು.—ನೋಟಿಸನ್ನು ಕಳಿಸಿ.

Failure of rains and loss of crops in the State

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯು ಪ್ರಾರಂಭವಾದಲ್ಲಿಂದ ನಾವು ರಾಜ್ಯದಲ್ಲಿರುವ ರುತುಮಾನ ಪರಿಸ್ಥಿತಿಯನ್ನು ಚರ್ಚೆಮಾಡಿದ್ದೇವೆ. ಮಂತ್ರಿಗಳು ಈ ಸಭೆಗೆ ಉತ್ತರ ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಕೆಲಸಗಳು ಪ್ರಾರಂಭವಾಗಿವೆಯೇ ಎಂದು ಅಧಿಕಾರಿಗಳಿಂದಿಗೆ ಬೆಳಿಗ್ಗೆ ಫೋನಿನಲ್ಲಿ ಕೇಳಿದೆ. ಕಳೆದ ಒಂದು ವರ್ಷದಿಂದೀಚೆಗೆ ಮಳೆ ಸರಿಯಾಗಿ ಬಾರದೆ ತೊಂದರೆಯಾಗಿದೆ. ಡಿ.ಸಿ. ಯವರು ಟೂರ್ ಮಾಡಿ ಇದನ್ನು ಪರಿಶೀಲಿಸಿದ್ದಾರೆ. ಈ ಸಂಬಂಧದಲ್ಲಿ ಕೆಲಸ ಪ್ರಾರಂಭವಾಗುವ ಬಗ್ಗೆ ಮುಖ್ಯಮಂತ್ರಿಗಳು ನಿರ್ದಿಷ್ಟವಾಗಿ ಉತ್ತರ ಕೊಟ್ಟರು. ಪೀಸ್ ವರ್ಕ್‌ನಲ್ಲಿ ಸ್ಥಳೀಯ ಜನರಿಗೆ ಕೆಲಸ ಕೊಟ್ಟು ಮಾಡಿಸುತ್ತೇವೆಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಿದರು. 12ನೆಯ ತಾರೀಖು ಈ ಅಧಿವೇಶನ ಪ್ರಾರಂಭವಾಯಿತು. ಇಂದು 27ನೆಯ ತಾರೀಖು. ಸರಕಾರ ಹೇಳಿಕೆ ಕೊಟ್ಟಮೇಲೆ 15 ದಿವಸಗಳು ಏನು ಕಾರ್ಯಕ್ರಮ ಕೈಕೊಂಡಿದೆ ? ಹಳೆಯ ಮೈಸೂರು ಭಾಗದಲ್ಲಿ ಮಳೆಯಿಲ್ಲದೆ ಹೆಚ್ಚು ತೊಂದರೆಯಾಗಿದೆ.

ಅಧ್ಯಕ್ಷರು.—ಎಷ್ಟು ತಿಂಗಳಿಂದೆ ಮಾನ್ಯ ಸದಸ್ಯರು ಹೇಳುವುದು ?

Failure of rains and loss of crops in the State.

ಶ್ರೀ ಎಚ್. ಡಿ. ದೇವೇಗೌಡ.—ನಾಲ್ಕೈದು ತಿಂಗಳಿಂದ ಮೊದಲನೆಯ ಬೆಳೆ ಸಂಪೂರ್ಣವಾಗಿ ಹೋಗಿದೆ, ಎರಡನೆಯ ಬೆಳೆ ಕೂಡ ಒಣಗಿಹೋಗಿದೆ. ಈ ದಿವಸ ಒಂದು ಕೆಲಸ ಕೂಡ ಪ್ರಾರಂಭಿಸಿಲ್ಲ. ಬಜೆಟ್ ಕೆಲಸಕ್ಕೆ ಕೂಡ ಒಂದು ಕಾಸೂ ಬಂದಿಲ್ಲ, ಹೆಚ್ಚು ಖರ್ಚುಮಾಡಬಾರದೆಂದು ನಿರ್ದೇಶ ಬಂದಿದೆ ಎಂದು ಹೇಳುತ್ತಿದ್ದಾರೆ. ಒಂದು ಕೆರೆಗೆ ಬಜೆಟ್ಟಿನಲ್ಲಿ 5 ಸಾವಿರ ರೂಪಾಯಿಗಳ ಟೋಕನ್ ಗ್ರಾಂಟಿದೆ, ಒಂದು ರಸ್ತೆಗೆ 2–3 ಸಾವಿರ ರೂಪಾಯಿಗಳ ಟೋಕನ್ ಗ್ರಾಂಟಿದೆ. ಅದಕ್ಕಿಂತ ಹೆಚ್ಚು ಖರ್ಚು ಮಾಡಬಾರದು ಎಂದು ಹೇಳಿದ್ದಾರೆ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ತೊಂದರೆಯಾಗಿದೆ ಎಂದು ನೋಡಿ ಮಂತ್ರಿಗಳು ತಕ್ಕ ವ್ಯವಸ್ಥೆಮಾಡಿಲ್ಲ. ಬಜೆಟ್ ಕೆಲಸವೆಷ್ಟು ಕೈಕೊಳ್ಳಲಾಗಿದೆ, ಬಜೆಟ್ ಕೆಲಸವಲ್ಲದೆ ಎಷ್ಟು ಕೈಕೊಂಡಿದೆ, ಯಾವ ಯಾವ ಪ್ರದೇಶಗಳನ್ನು ನೋಡಿ ವ್ಯವಸ್ಥೆ ಮಾಡಿದೆ ಎಂಬುದನ್ನು ಹೇಳಬೇಕು. ನಾರ್ಮಲ್ ಗ್ರಾಂಟೆಷ್ಟು ಮತ್ತು ಪೀಸ್‌ವರ್ಕ್ ಎಷ್ಟು ಮಾಡಿದೆ ಎಂಬುದನ್ನು ಕೂಡಲೆ ಸಭೆಗೆ ತಿಳಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮಾಡುತ್ತಿರುವುದು ಅತ್ತ ಅವರಿಗೆ ಹಣ ಖರ್ಚಾದಹಾಗೆ ಇರಬಾರದು, ಇತ್ತ ಜನರಿಗೆ ಕೆಲಸ ಆದಹಾಗೆ ಇರಬಾರದು ಅನ್ನುತಕ್ಕ ರೀತಿ ಕೇಸುಗಳನ್ನು ನಡೆಸುತ್ತಿದ್ದಾರೆ. ಒಂದು ಹೋಬಳಿಯಲ್ಲಿ ಅನೇಕ ಗ್ರಾಮುಗಳಿರುತ್ತವೆ. ಅಲ್ಲಿಗೆ ಒಬ್ಬ ಸೂಪರ್‌ವೈಜರನ್ನು ಇಟ್ಟರೆ ಕೆಲಸಗಳಾಗುತ್ತವೆಯೇ ? ಮಾನ್ಯ ಅಧ್ಯಕ್ಷರೇ, ತಾವು ತಮ್ಮ ಗ್ರಾಮದ ಕಡೆ ಇತ್ತೀಚೆಗೆ ಹೋದಂತೆ ಕಾಣುವುದಿಲ್ಲ. ಅಲ್ಲಿ ಕೂಡ ಮಳೆ ಸಂಪೂರ್ಣವಾಗಿ ಒಂದು ವಾರದಿಂದ ಬಾರದೆ ಪೈರುಗಳೆಲ್ಲಾ ಒಣಗುತ್ತಿವೆ. ಜನರಿಗೆ ಕೂಲಿ ಸಿಕ್ಕುತ್ತಿದ್ದ ಆ ನಾರ್ಮಲ್ 64 ಫಾಮಿನ್ ರಿಲೀಫ್ ಕಾಮಗಾರಿಗಳನ್ನೂ ಕೂಡ ನಿಲ್ಲಿಸಿದ್ದಾರೆ. ಜನರಿಗೆ ಕುಡಿಯುವ ನೀರಿನ ತೊಂದರೆ ಇನ್ನೂ ತಪ್ಪಲಿಲ್ಲ. ಒಂದೊಂದು ಊರಲ್ಲಿ ಬೋರ್‌ವೆಲ್ಲನ್ನು ಹಾಕಿ ನೀರು ಬಾರದೆ ಇದ್ದಾಗ್ಗೂ ಅದನ್ನು ಅಷ್ಟಕ್ಕೇ ಕೈಬಿಟ್ಟು ಅವರು ಅಲ್ಲಿಂದ ಹೊರಟುಹೋಗಿದ್ದಾರೆ. ಅವರ ಪತ್ತೆಯೇ ಇಲ್ಲ. ಅನೇಕ ಗ್ರಾಮಗಳಲ್ಲಿ ಬೇರೆ ವೆಲ್ಲುಗಳು ಫೈಲಾಗಿವೆ.